# <u>4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ</u>

## <u>ಸಿ.ಸಿ. ನಂ.5688/2009</u>

| | | |
|---|---|---|
| ಫಿರ್ಯಾದಿದಾರರು | : | ಮೆಃ ಪಾಲಾಡ ಆಗ್ರೋ ರಿಸರ್ಚ್ ಪೌಂಡೇಶನ್ಸ್ ಪ್ರೈವೇಟ್ ಲಿಮಿಟಿಡ್, ಸರ್ವೆ ನಂ.92/5, ಕನ್ನಲ್ಲಿ ಗ್ರಾಮ, ಸೀಗೂನಹಳ್ಳಿ ಕ್ರಾಸ್, ಮಾಗಡಿ ಮೈನ್ ರೋಡ್, ಯಶವಂತಪುರ ಹೋಬಳಿ, ಬೆಂಗಳೂರು-91.<br>(ಇವರ ಪರವಾಗಿ ಪ್ರತಿನಿಧಿಸುವವರು ಶ್ರೀ ಸಿ.ಎಂ.ಎನ್. ಶಾಸ್ತ್ರೀ, ಮ್ಯಾನೇಜಿಂಗ್ ಡೈರೇಕ್ಟರ್) |
| | | **- ವಿರುದ್ಧ -** |
| ಆರೋಪಿ | ಃ | ಶ್ರೀ ಅಶೋಕ್ ಕುಮಾರ್ ಶೆಟ್ಟಿ, ಬಿನ್. ಚಂದ್ರಶೇಖರ್ ಶೆಟ್ಟಿ, ಪೋಸ್ಟ್ ಆಫೀಸ್ ಹತ್ತಿರ, ಹೊಸಮಟ ಕೋರ್ಗೆ ಗ್ರಾಮ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ.<br>ವಾಸಃ ನಂ.301, 11ನೇ ಮೈನ್, 3ನೇ ಹಂತ, ಬಿಇಎಂಎಲ್ ಲೇಔಟ್, ರಾಜರಾಜೇಶ್ವರಿ ನಗರ, ಬೆಂಗಳೂರು - 98. |

## <u>ದೋಷಾರೋಪಣೆ</u>

ಶ್ರೀ. **ಸೋಮನಾಥ, ಬಿ.ಎ.(ಲಾ), ಎಲ್.ಎಲ್.ಬಿ.,** 4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೋರಿಸಿದ್ದೇನೆ.

ಆರೋಪಿಯಾದ ನೀವು ದೂರುದಾರರಿಗೆ ಸೇರಿದ ಮೆಃ ಪಾಲಾಡ ಆಗ್ರೋ ರಿಸರ್ಚ್ ಪೌಂಡೇಶನ್ಸ್ ಪ್ರೈವೇಟ್ ಲಿಮಿಟಿಡ್ ಸಂಸ್ಥೆಯಲ್ಲಿ ಏರಿಯಾ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದು, ನಂತರ ನಿಮ್ಮನ್ನು ಬ್ಯಾಂಚ್ ಮ್ಯಾನೇಜರ್ ಆಗಿ ಬಡ್ತಿ ನೀಡಿದ್ದಾಗಿ, ನಂತರ ಪ್ರಾಜೆಕ್ಟ್

ಮ್ಯಾನೇಜರ್ ಆಗಿ ಬಡ್ತಿ ನೀಡಿ ಉತ್ತರಪ್ರದೇಶದ ಮೊರದಾಬಾದ್ ನ ಮಿಂಟ್ ಪ್ರಾಜೆಕ್ಟ್ ನೋಡಿಕೊಳ್ಳಲು ನೇಮಕ ಮಾಡಿದ್ದು, ಸದರಿ ಯೋಜನೆಯನ್ನು ಆರೋಪಿಯಾದ ನಿಮ್ಮ ಜೊತೆ ನೋಡಿಕೊಳ್ಳಲು ನಿಹಾಲ್ ಸಿಂಗ್ ಮತ್ತು ಬಿ.ಎನ್. ಪಾಠಕ್ ರವರನ್ನು ಸಹಾಯಕರಾಗಿ ನೇಮಕ ಮಾಡಿದ್ದು, ಬಿ.ಎನ್. ಫಾಠಕ್ ರವರ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬಿಸೌಲಿ ಶಾಖೆಯಲ್ಲಿ ಅಕೌಂಟ್ ನಂ.11419451780 ರಂತೆ ಬ್ಯಾಂಕ್ ಖಾತೆ ತೆರೆದಿದ್ದು, ಸದರಿ ಖಾತೆಯ ಮುಖಾಂತರ ರೈತರಿಗೆ ಹಣ ವಿತರಣೆಯನ್ನು ಮಾಡುತ್ತಿದ್ದು, ನೀವು ನೀಡಿದ ಸ್ಟೇಟ್ ಮೆಂಟ್ ಮತ್ತು ವಿತರಣೆಯಾಗಿರುವ ಚೆಕ್ ಗಳ ನಡುವೆ ಹೋಲಿಕೆಯಾಗಿರುವುದಿಲ್ಲ, ಆರೋಪಿಯಾದ ನಿಮ್ಮ ವ್ಯವಹಾರಗಳ ಬಗ್ಗೆ ಸಂಶಯ ಬಂದು ಪರಿಶೀಲನೆ ಮಾಡಿದಾಗ ನೀವು ರೈತರ ಹೆಸರಿನಲ್ಲಿ ಚೆಕ್ ಗಳನ್ನು ನೀಡಿರುವುದಾಗಿ ನಮೂದಿಸಿ ಸದರಿ ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತೀರಿ. ಅದೇ ರೀತಿ ಆರೋಪಿಯಾದ ನೀವು ಫಾಠಕ್ ರವರ ಖಾತೆಯಿಂದ 2 ಲಕ್ಷದ 200 ರೂ. ಗಳನ್ನು ದಿನಾಂಕ 31-07-2008 ರಂದು ಆರೋಪಿಯಾದ ನೀವು ಆರ್.ಆರ್. ನಗರ ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಖಾತೆಗೆ ವರ್ಗಾವಣೆ ಮಾಡಿಕೊಂಡಿದ್ದಾಗಿ, ದಿನಾಂಕ 01-07-2008 ರಂದು ರೂ.25,000/- ವನ್ನು ಬಿಸುಳ್ಳಿ ಬ್ರಾಂಚ್ ನಿಂದ ಜೆ.ಸಿ. ರಸ್ತೆ, ಬೆಂಗಳೂರು ಸಿಟಿ ಬ್ರಾಂಚ್ ನ ನಿಮ್ಮ ವೈಯಕ್ತಿಕ ಬ್ಯಾಂಕ್ ಖಾತೆ ಸಂಖ್ಯೆಃ 1050965738 ಹಾಗೂ ದಿನಾಂಕ 03-07-2008 ರಂದು ರೂ.32,450/- ಅನ್ನು ನಿಹಾಲ್ ಸಿಂಗ್ ಮೂಲಕ ಜೆ.ಸಿ. ರಸ್ತೆ, ಬೆಂಗಳೂರು ಸಿಟಿ ಬ್ರಾಂಚ್ ನ ನಿಮ್ಮ ವೈಯಕ್ತಿಕ ಬ್ಯಾಂಕ್ ಖಾತೆ ಸಂಖ್ಯೆಃ 1050965738 ವರ್ಗಾವಣೆ ಮಾಡಿಸಿಕೊಂಡು ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತೀರಿ. ಈ ನಿಮ್ಮ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ.409 ರಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿದ್ದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಒಳಪಡುತ್ತದೆ.

ಎರಡನೆಯದಾಗಿ, ಆರೋಪಿಯಾದ ನೀವು 2007 ರಲ್ಲಿ ಪ್ರತ್ಯೇಕ ಕಂಪನಿಯನ್ನು ತೆರೆದು ಬಯೋ ಪರ್ಟಿಲೈಶ‌ರ್ಸ್ ಮತ್ತು ಮೈಕ್ರೋ ನಟ್ ಮಿಂಟ್ಸ್ ತಯಾರು ಮಾಡಲು ಪ್ರಾರಂಭ ಮಾಡಿಕೊಂಡು ದೂರುದಾರರ ಕಂಪನಿ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡಿ ಮೋಸ ಮಾಡಿರುತ್ತೀರಿ. ಈ ನಿಮ್ಮ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ.420 ರಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿದ್ದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಒಳಪಡುತ್ತದೆ.

ಕೊನೆಯದಾಗಿ, ಆರೋಪಿಯಾದ ನೀವು ದೂರುದಾರರ ಕಂಪನಿಗೆ ಸೇರಿದ ರೀತಿಯ ಲೇಬಲ್ ಗಳು ಮತ್ತು ವಿನ್ಯಾಶಗಳನ್ನು ನಿಮ್ಮ ವಸ್ತುಗಳಿಗೆ ಉಪಯೋಗಕೊಂಡಿರುತ್ತೀರಿ. ಈ ನಿಮ್ಮ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ.465 ರಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿದ್ದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಒಳಪಡುತ್ತದೆ.

ಈ ಮೇಲ್ಕಂಡ ಆಪಾದನೆಗಳ ಬಗ್ಗೆ ಆರೋಪಿಯಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡತಕ್ಕದ್ದು ಎಂದು ನಿರ್ದೇಶಿಸುತ್ತೇನೆ.

ದಿನಾಂಕಃ 29.07.2025

ಬೆಂಗಳೂರು. 4ನೇ ಹೆ ಮು ನ್ಯಾ ದಂಡಾಧಿಕಾರಿ.

## <u>4ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ</u>

### <u>ಸಿ.ಸಿ. ನಂ.5688/2009</u>

ಫಿರ್ಯಾದಿದಾರರು : ಮೆಃ ಪಾಲಾಡ ಆಗ್ರೋ ರಿಸರ್ಚ್ ಪೌಂಡೇಶನ್ಸ್ ಪ್ರೈವೇಟ್ ಲಿಮಿಟೆಡ್, (ಇವರ ಪರವಾಗಿ ಪ್ರತಿನಿಧಿಸುವವರು ಶ್ರೀ ಸಿ.ಎಂ.ಎನ್. ಶಾಸ್ತ್ರೀ, ಮ್ಯಾನೇಜಿಂಗ್ ಡೈರೇಕ್ಟರ್)

- **ವಿರುದ್ಧ** -

ಆರೋಪಿ ಃ ಶ್ರೀ ಅಶೋಕ್ ಕುಮಾರ್ ಶೆಟ್ಟಿ, ಬಿನ್. ಚಂದ್ರಶೇಖರ್ ಶೆಟ್ಟಿ,

### <u>ಆರೋಪಣೆ</u>

ಪ್ರಶ್ನೆ 1) ನಿಮಗೆ ಓದಿ ವಿವರಿಸಿ ಹೇಳಿದ ಆರೋಪಣೆ ತಿಳಿಯಿತೆ ?

ಉತ್ತರಃ

ಪ್ರಶ್ನೆ 2) ನೀವು ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಇಲ್ಲವೇ ವಿಚಾರಣೆಯಾಗ ಬಯಸುವಿರಾ ?

ಉತ್ತರಃ

ದೋಷಾರೋಪಣೆಯನ್ನು ಅರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ ನಂತರ ಅವರು ನೀಡಿದ ಉತ್ತರಗಳನ್ನು ಸರಿಯಾಗಿ ಬರೆದುಕೊಂಡಿರುವೆನೆಂದು ದೃಢೀಕರಿಸುತ್ತೇನೆ.

ದಿನಾಂಕಃ 29.07.2025

ಬೆಂಗಳೂರು. 4ನೇ ಹೆ ಮು ನ್ಯಾ ದಂಡಾಧಿಕಾರಿ.